# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 587 (677) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 09.03.2026 |

| | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆಯಡಿ ಸ್ಥಾಪಿತವಾಗಿರುವ ನೃಪತುಂಗ ವಿಶ್ವವಿದ್ಯಾಲಯದ ಆವರಣದಲ್ಲಿ ನೂತನ ಕಟ್ಟಡವನ್ನು ನಿರ್ಮಿಸಲು ಯಾವಾಗ ಅನುಮೋದನೆ ನೀಡಲಾಗಿತ್ತು; ನೂತನ ಕಟ್ಟಡ ಕಾಮಗಾರಿ ಯಾವಾಗ ಪ್ರಾರಂಭಿಸಲಾಯಿತು; ಯಾವ ವರ್ಷದಲ್ಲಿ ಈ ಕಾಮಗಾರಿ ಪೂರ್ಣಗೊಂಡಿತ್ತು ಮತ್ತು ಎಷ್ಟು ಚದರ ಅಡಿಯಲ್ಲಿ ಈ ನೂತನ ಕಟ್ಟಡವನ್ನು ನಿರ್ಮಿಸಲು ಯೋಜಿಸಲಾಗಿತ್ತು; | ಸರ್ಕಾರದ ಆದೇಶ ಸಂಖ್ಯೆ: ಇಡಿ 137 ಹೆಚ್‌ಪಿಯು 2021, ದಿನಾಂಕ:08-04-2022 ಮತ್ತು ದಿನಾಂಕ:20-01-2023ರನ್ವಯ ನೂತನ ಕಟ್ಟಡವನ್ನು ನಿರ್ಮಿಸಲು ಅನುಮೋದನೆ ನೀಡಲಾಗಿದೆ. ಸದರಿ ಕಟ್ಟಡ ಕಾಮಗಾರಿಯನ್ನು ದಿನಾಂಕ:27.02.2023 ರಂದು ಪ್ರಾರಂಭಿಸಲಾಯಿತು. ಈ ಕಟ್ಟಡದ ಕಾಮಗಾರಿಯು ಏಪ್ರಿಲ್-2025 ರಂದು ಪೂರ್ಣಗೊಂಡಿರುತ್ತದೆ.<br><br>ಈ ಕಟ್ಟಡದ ವಿಸ್ತೀರ್ಣವು 106192.13 ಚದರ ಅಡಿ ಆಗಿರುತ್ತದೆ. |
| (ಆ) | ರಾಜ್ಯದ ಸರ್ಕಾರದ ಅನುದಾನದಡಿ ನಿರ್ಮಾಣಗೊಂಡ ನೂತನ ಕಟ್ಟಡವು ಅಂದಾಜು ಎಷ್ಟು ಕೋಟಿ ರೂ.ಗಳಲ್ಲಿ ನಿರ್ಮಿಸಲಾಗಿದೆ; ಸದರಿ ಕಟ್ಟಡ ನಿರ್ಮಿಸಲು ಗುತ್ತಿಗೆದಾರರಿಂದ ಒಂದು ಚದರ ಅಡಿ ಮತ್ತು ಒಂದು ಚದರ ಮೀಟರ್‌ಗೆ ಎಷ್ಟು ಮೊತ್ತ ನಿಗಧಿಪಡಿಸಲಾಗಿತ್ತು; | ಈ ಕಟ್ಟಡವನ್ನು ಕೇಂದ್ರ ಪುರಸ್ಕೃತ ರೂಸಾ (RUSA) ಯೋಜನೆಯಡಿಯಲ್ಲಿ ರೂ.42.65 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.<br><br>ಸದರಿ ಕಟ್ಟಡ ನಿರ್ಮಿಸಲು ಗುತ್ತಿಗೆದಾರರಿಂದ ಒಂದು ಚದರಡಿಗೆ ರೂ 4,016.30 ಗಳನ್ನು ಹಾಗೂ ಒಂದು ಚದರ ಮೀಟರ್ ಗೆ ರೂ 43,231.50 ರಂತೆ ನಿಗಧಿಪಡಿಸಲಾಗಿದೆ. |
| (ಇ) | ಸದರಿ ಕಟ್ಟಡದಲ್ಲಿ ವಿಜ್ಞಾನ ಉಪಕರಣಗಳು, ಪೀಠೋಪಕರಣಗಳ ಮತ್ತು ಇತ್ಯಾದಿ ಉಪಕರಣಗಳನ್ನು ಖರೀದಿಸಲು ಖರ್ಚು ಮಾಡಲಾದ ಮೊತ್ತವೆಷ್ಟು; ಸದರಿ ಕಟ್ಟಡ ನಿರ್ಮಾಣಗೊಂಡು ಉಪಯೋಗಕ್ಕಾಗಿ ತಯಾರಾಗಿದ್ದರೂ ಸಹ ಈ ಕಟ್ಟಡಕ್ಕೆ ಇಲ್ಲಿಯವರೆಗೆ ಅಗ್ನಿಶಾಮಕ ಮತ್ತು ತುರ್ತು | ಪ್ರಯೋಗಾಲಯದ ಉಪಕರಣಗಳು / ಪೀಠೋಪಕರಣಗಳ ಖರೀದಿಗೆ ರೂ.2.18 ಕೋಟಿ ಅನುದಾನ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.<br><br>ಸದರಿ ಕಟ್ಟಡದ 6ನೇ ಮತ್ತು 7ನೇ ಮಹಡಿಯಲ್ಲಿ ಒಳಬಾಗದ Civil ಕಾಮಗಾರಿಗಳು |

| | | |
|---|---|---|
| | ಸೇವೆಗಳ ಇಲಾಖೆಯಿಂದ ಸುರಕ್ಷತಾ ಮಾನದಂಡಗಳ ಪ್ರಮಾಣಪತ್ರ ನೀಡದಿರಲು ಕಾರಣಗಳೇನು; | ಅಪೂರ್ಣಗೊಂಡಿರುವುದರಿಂದ ಈ ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವೆ ಇಲಾಖೆಯಿಂದ ಸುರಕ್ಷತ ಪ್ರಮಾಣ ಪತ್ರ ನೀಡಿರುವುದಿಲ್ಲ. |
| (ಈ) | ಈಗ ಹಾಲಿ ಇರುವ ಕಟ್ಟಡಕ್ಕೆ ನವೀಕರಣ ಕಾರ್ಯ ಕೈಗೊಳ್ಳಲಾಗಿದೆಯೇ: ಕೈಗೊಂಡಿದ್ದಲ್ಲಿ, ಈ ನವೀಕರಣ ಕಾರ್ಯಕ್ಕೆ ಖರ್ಚಾಗಿರುವ ಬಾಬ್ತು ಎಷ್ಟು; ಯಾವ ಯಾವ ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; | ಹೌದು<br><br>ರೂ. 7.62 ಕೋಟಿ ವೆಚ್ಚದಲ್ಲಿ ನವೀಕರಣ ಕಟ್ಟಡ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ.<br><br>ನವೀಕರಣ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿದೆ:<br><br>1. ಹಳೆ ಕಟ್ಟಡದ ಮೇಲ್ಛಾವಣಿಯ ಮೇಲ್ಪದರವನ್ನು ತೆಗೆದು Waterproof concrete ಹಾಕಲಾಗಿದೆ.<br><br>2.ಕಟ್ಟಡದ ಗೋಡೆ ಮತ್ತು ಮಾಳಿಗೆಯ ಪ್ಲಾಸ್ಟರಿಂಗ್ (Plastering of building)<br><br>3.ಪ್ರಯೋಗಾಲಯಗಳಿಗೆ (Platforms) ಹಾಕಲಾಗಿದೆ.<br><br>4.MS ಕಿಟಕಿಗಳನ್ನು ತೆಗೆದು UPVC ಕಿಟಕಿಗಳನ್ನು ಅಳವಡಿಸಲಾಗಿದೆ.<br><br>5.ಪ್ರಯೋಗಾಲಯ ಮತ್ತಿತರ ಕಡೆ ನೆಲಕ್ಕೆ vitrified tiles ಹಾಕಲಾಗಿದೆ.<br><br>6.ವಿದ್ಯುತ್ ಕೆಲಸ, ಪ್ಲಂಬಿಂಗ್ ಕೆಲಸ, ಹಾಳಾಗಿದ್ದ ಬಾಗಿಲುಗಳ ಬದಲಾವಣೆ, ವಸ್ತು ಸಂಗ್ರಹಾಲಯಗಳ ದುರಸ್ತಿ, ಕಟ್ಟಡದ ಪೈಂಟಿಂಗ್ ಕೆಲಸಗಳನ್ನು ಪೂರ್ಣಗೊಳಿಸಲಾಗಿರುತ್ತದೆ. |
| (ಉ) | University Grants Commission ಮಾನದಂಡಗಳನ್ವಯ ನೃಪತುಂಗ ವಿಶ್ವವಿದ್ಯಾಲಯವು ಭೂಮಿ ವಿಸ್ತೀರ್ಣವನ್ನು ಹೊಂದಿದೆಯೇ; ನೃಪತುಂಗ ವಿಶ್ವವಿದ್ಯಾಲಯಕ್ಕೆ ಎಷ್ಟು ಕಾಲೇಜುಗಳು ಸಂಯೋಜಿತವಾಗಿವೆ: ಮತ್ತು ಈ ವಿಶ್ವವಿದ್ಯಾಲಯ ಹೊರತುಪಡಿಸಿ ಬೇರೆ ಯಾವುದಾದರೂ ವಿಶ್ವವಿದ್ಯಾಲಯವು ಕಾರ್ಯ ನಿರ್ವಹಿಸುತ್ತಿದೆಯೇ; University Grants | ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ RUSA ಯೋಜನೆಯಡಿ ಈ ಹಿಂದೆ ಇದ್ದ ಸರ್ಕಾರಿ ಕಾಲೇಜನ್ನು ಉನ್ನತೀಕರಿಸಿ Unitary ವಿಶ್ವವಿದ್ಯಾಲಯವನ್ನಾಗಿ ಸ್ಥಾಪಿಸಲಾಗಿರುವುದರಿಂದ, ಈ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಕಾಲೇಜುಗಳು ಸಂಯೋಜನೆ ನೀಡಲು ಅವಕಾಶವಿರುವುದಿಲ್ಲ. ಈ ವಿಶ್ವವಿದ್ಯಾಲಯಕ್ಕೆ ಯು.ಜಿ.ಸಿ. ಮಾನದಂಡಗಳನ್ವಯ ಭೂಮಿಯ ಅಗತ್ಯತೆ ಇರುವುದಿಲ್ಲ. ಆದ್ದರಿಂದ, ಈ ವಿಶ್ವವಿದ್ಯಾನಿಲಯಕ್ಕೆ |

<table>
<tr><td></td><td>Commission ಮಾನದಂಡಗಳನ್ವಯ ಒಂದು ವಿಶ್ವವಿದ್ಯಾಲಯದಲ್ಲಿ ಮತ್ತೊಂದು ವಿಶ್ವವಿದ್ಯಾಲಯವನ್ನು ನಡೆಸಲು ಅನುಮತಿ ನೀಡಲಾಗಿದೆಯೇ ಎಂಬುದರ ಬಗ್ಗೆ ಮಾಹಿತಿ ನೀಡುವುದು;</td><td>UGC ಮಾನದಂಡಗಳು ಅನ್ವಯಿಸುವುದಿಲ್ಲ ಹಾಗೂ ಈ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಶ್ವವಿದ್ಯಾನಿಲಯ ನಡೆಸಲು ಅನುಮತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.</td></tr>
<tr><td>(ಊ)</td><td>ನೃಪತುಂಗ ವಿಶ್ವವಿದ್ಯಾಲಯದಲ್ಲಿ ಖಾಯಂ ಉಪ ಕುಲಪತಿಯನ್ನು ಯಾವಾಗ ನೇಮಕ ಮಾಡಲಾಗುವುದು ಮತ್ತು ಈ ವಿಶ್ವವಿದ್ಯಾಲಯಕ್ಕೆ ಮಂಜೂರಾದ, ಭರ್ತಿಯಾದ ಮತ್ತು ಖಾಲಿಯಿರುವ ಹುದ್ದೆಗಳ ವಿವರ ನೀಡುವುದು; ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರು ಮತ್ತು ಖಾಯಂ ನೌಕರರ ಸಂಖ್ಯೆ ಎಷ್ಟು ಎಂಬುದರ ಬಗ್ಗೆ ಮಾಹಿತಿ ನೀಡುವುದು?</td><td>ನೃಪತುಂಗ ವಿಶ್ವವಿದ್ಯಾಲಯಕ್ಕೆ ಕುಲಪತಿಗಳ ನೇಮಕ ಮಾಡುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.<br><br>ವಿಶ್ವವಿದ್ಯಾಲಯಕ್ಕೆ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿದ್ದಾಗ ಮಂಜೂರಾಗಿರುವ ಹುದ್ದೆಗಳು ಬೋಧಕ-100, ಬೋಧಕೇತರ-43 ಆಗಿದ್ದು, ವಿಶ್ವವಿದ್ಯಾಲಯದ ಪರಿನಿಯಮಾವಳಿಗಳ ರಚನೆ ಪ್ರಕ್ರಿಯೆ ಜಾರಿಯಲ್ಲಿರುವುದರಿಂದ opt-out, opt-in ಪ್ರಕ್ರಿಯೆ ಇನ್ನೂ ಕೈಗೊಂಡಿರುವುದಿಲ್ಲ.<br><br><table><tr><th>ಕ್ರ. ಸಂ.</th><th>ಬೋಧಕ ಹುದ್ದೆಗಳು</th><th>ಬೋಧಕೇತರ ಹುದ್ದೆಗಳು</th></tr><tr><td>1.</td><td>100</td><td>43</td></tr></table><br>ಆದ್ದರಿಂದ, ಖಾಲಿ ಹುದ್ದೆಗಳ ಸಂಖ್ಯೆಗೆ ಎದುರಾಗಿ ಗುತ್ತಿಗೆ ಆಧಾರದ ಮೇಲೆ ಯಾರನ್ನೂ ನೇಮಕ ಮಾಡಿಕೊಂಡಿರುವುದಿಲ್ಲ.</td></tr>
</table>

**ಸಂಖ್ಯೆ: ಇಡಿ/106/ಯುಆರ್‌ಸಿ/2026**

**(ಡಾ|| ಎಂ.ಸಿ. ಸುಧಾಕರ್)**

ಉನ್ನತ ಶಿಕ್ಷಣ ಸಚಿವರು